these bridges, I am prepared to place the information before the House.

Sri ANNA RAO GANAMUKHI.—In (*a*) the question is "the number of bridges sanctioned across nalas and rivers in Dharwar District during 1961–62". The Hon'ble member is asking about a particular bridge sanctioned under this scheme. He is not asking about any bridge for which foundation stone was laid.

Sri VEERENDRA PATIL.—As regards the bridges sanctioned during 1961–62, I have said that three bridges were sanctioned and I have given the names of these bridges. If the particular bridge referred to by the Hon'ble member is not included in them, it means that the bridge has not been anctioned during 1961-62.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ಮೂರು ಸೇತುವೆಗಳಿಗಾಗುವ ಖರ್ಚಿನಲ್ಲಿ ರಾಜ್ಯ ಸರ್ಕಾರದ ಪಾಲೆಷ್ಟು ಮತ್ತು ಕೇಂದ್ರ ಸರ್ಕಾರದ ಪಾಲೆಷ್ಟು?

ಶ್ರೀ ವೀರೇಂದ್ರ ಪಾಟೀಲ್.—ತಾವು ಕೇಳುವುದು ಬಹಳ ತಪಶೀಲಾಯ್ತು. ಅದಕ್ಕೆ ನೋಟೀಸ್ ಬೇಕು. ಪ್ರತಿಯೊಂದಕ್ಕೂ ಕೇಂದ್ರ ಸರ್ಕಾರದ್ದು ಸ್ವಲ್ಪ ಮತ್ತು ನಮ್ಮದು ಸ್ವಲ್ಪ ಎಂದಿಲ್ಲ. ಕೆಲವಕ್ಕೆ ಕೇಂದ್ರ ಸರ್ಕಾರವೇ ಪೂರ್ಣ ಹಣ ಕೊಡುವುದು; ಕೆಲವಕ್ಕೆ ಕೇಂದ್ರ ಸರ್ಕಾರ ಸ್ವಲ್ಪ ಭಾಗ ಮತ್ತು ಈ ಸರ್ಕಾರ ಸ್ವಲ್ಪ ಭಾಗ ಕೊಡಬೇಕಾಗುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ಸೇತುವೆಗಳು ಈಗ ಉತ್ತರ ಕೊಟ್ಟಂತೆ ಯಾವ ಕ್ಯಾಟಗರಿಯಲ್ಲಿ ಬರುತ್ತವೆ?

ಶ್ರೀ ವೀರೇಂದ್ರ ಪಾಟೀಲ್.—ನೋಟೀಸ್.

ಶ್ರೀ ಎ. ಜೆ. ದೊಡ್ಡಮೇಟಿ.—ಈ ಮೂರು ಸೇತುವೆಗಳ ಪೈಕಿ ಯಾವುದಕ್ಕೆ ಟೆಕ್ನಿಕಲ್ ಸ್ಯಾಂಕ್ಷನ್ ಆಗಿಲ್ಲ, ಎಷ್ಟು ದಿವಸಗಳಲ್ಲಾಗುತ್ತದೆ ಎಂಬುದನ್ನು ನಿಶ್ಚಿತವಾಗಿ ಹೇಳುತ್ತೀರಾ?

ಶ್ರೀ ವೀರೇಂದ್ರ ಪಾಟೀಲ್.—ಹೆಚ್ಚು ತಡವಾಗುವುದಿಲ್ಲ; ಆದಷ್ಟು ತೀವ್ರವಾಗಿ ಆಗುತ್ತದೆ. ಮಾನ್ಯ ಸದಸ್ಯರು ಹೇಳಿದಂತೆ ಕೆಲವು ಕಷ್ಟಗಳಿವೆ. ಟೆಕ್ನಿಕಲ್ ಸ್ಯಾಂಕ್ಷನ್ ಆದರೆ ಟೆಂಡರ್ ಕರೆದರೆ ಬರುವುದಿಲ್ಲ. ನಮ್ಮ ಎಸ್ಟಿಮೇಟ್ ರೇಟಿಗಿಂತ ಸೇಕಡ ಅರವತ್ತರಷ್ಟು ಹೆಚ್ಚು ದರ ಕೋಟ್ ಮಾಡಿದಾಗ ಅಧಿಕಾರಿಗಳು ಟೆಂಡರ್ ಅಕ್ಸೆಪ್ಟ್ ಮಾಡಿಕೊಳ್ಳುವುದಕ್ಕಾಗುವುದಿಲ್ಲ. ಅದನ್ನು ಒಪ್ಪಿದರೆ P.A.C. ಯಿಂದ ಅಥವಾ ಹಣಕಾಸಿನ ಇಲಾಖೆಯಿಂದ ಅಥವಾ ಈ ಸಭೆಯಿಂದ ಆಕ್ಷೇಪಣೆ ಬರುತ್ತದೆ. ಈ ಕಷ್ಟವಿದೆಯೆಂಬುದನ್ನು ಮಾನ್ಯ ಸದಸ್ಯರು ತಿಳಿಯಬೇಕು.

ಶ್ರೀ ಎ. ಜೆ. ದೊಡ್ಡಮೇಟಿ.—ಟೆಕ್ನಿಕಲ್ ಮಂಜೂರಾತಿಯನ್ನು ಯಾವುದೇ ರೀತಿಯಲ್ಲಿ ಮಾಡಿದ ಹೊರತು ಮುಂದಿನ ನೆಗೋಷಿಯೇಷ್ ನಡೆಸುವುದರಿಂದೇನು ಫಲ?

ಶ್ರೀ ವೀರೇಂದ್ರ ಪಾಟೀಲ್.—ಟೆಕ್ನಿಕಲ್ ಸ್ಯಾಂಕ್ಷನ್ ಮಾಡುವುದರಲ್ಲಿ ತಡೆಮಾಡುವುದಿಲ್ಲವೆಂದು ನಾನಾಗಲೇ ಸ್ಪಷ್ಟಪಡಿಸಿದ್ದೇನೆ. ಅದಾದರೂ ಕಂಟ್ರಾಕ್ಟರುಗಳವರ ವಿಷಯಕ್ಕೆ ಬಂದಾಗ ತೀವ್ರ ಕಷ್ಟವಾಗುತ್ತದೆ.

Sri G. VENKATAI GOWDA.—In view of the reply of the Hon'ble Minister, is there not a need for revision of estimates?

Mr. SPEAKER.—That is outside the scope of the question.

———

Payment of compensation to the people of the submersion area under Sharavathi Valley Project.

*Q.—138. Sri V. S. LAKSHMIKANTHAPPA (Sagar).—

Will the Government be pleased to state:—

the number of cases in respect of payment of compensation to the people of the submersion area under Sharavathi Valley Project pending?

A.—Sri R. M. PATIL (Minister for Home) [on behalf of SRI M. V. KRISHNAPPA (Minister for Revenue].—

1286 cases are pending enquiry and awards.

Sri V. S. LAKSHMIKANTHAPPA.—Since when are these cases pending?

Sri R. M. PATIL.—Since the date of acquisition.

Sri V. S. LAKSHMIKANTHAPPA.—What is the maximum limit upto which the Special Officer for Rehabilitation is empowered to pass award?

Sri R. M. PATIL.—There is no maximum limit fixed.

ಒಬ್ಬ ಮಾನ್ಯ ಸದಸ್ಯರು.—ಈ ೧,೨೮೬ ಕೇಸುಗಳ ಪೈಕಿ ಎಕ್ಸ್‌ಪ್ರೆರಿ ಸ್ಪೇಜಿನಲ್ಲಿ ಎಷ್ಟಿವೆ, ಅವಾರ್ಡ್ ಸ್ಪೇಜಿನಲ್ಲಿ ಎಷ್ಟಿವೆ?

ಶ್ರೀ ಆರ್. ಎಂ. ಪಾಟೀಲ್.—ನೋಟೀಸ್.

ಶ್ರೀ ಕುಂದೂರು ರುದ್ರಪ್ಪ.—ಪೆಂಡಿಂಗ್‌ಇಲ್ಲದೆಯೆಂದು ಹೇಳಿದಿರಿ; ಅಕ್ವಿಸಿಷ್ಷ್ ಪೂರ್ತಿಯಾಗುವುದಕ್ಕೆ ಇನ್ನೆಷ್ಟು ವರ್ಷಗಳು ಬೇಕು? ಇದುವರೆಗೆ ತಡವಾಗಿರುವುದಕ್ಕೆ ಕಾರಣವೇನು? ಇನ್ನೆಷ್ಟು ದಿವಸದಲ್ಲಿ ಪೂರೈಸುತ್ತೀರಾ?

ಶ್ರೀ ಆರ್. ಎಂ. ಪಾಟೀಲ್—ಅದು ಸ್ವಲ್ಪ ಸಾಮಾನ್ಯ ಪ್ರಶ್ನೆಯಾಯಿತು. As early as possible ಮಾಡುತ್ತೇವೆಂದು ಹೇಳಬಹುದು.

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ.—ಸ್ಪೆಷಲ್ ಆಫೀಸರಿಗೆ ಇರತಕ್ಕ ಅಧಿಕಾರದ ಮಿತಿ ಏನು?

ಶ್ರೀ ಆರ್. ಎಂ. ಪಾಟೀಲ್.—೫,೦೦೦ ರೂಪಾಯಿಗಳ ವರೆಗೆ.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—೧,೨೮೬ ಕೇಸುಗಳಿಂದಾಗಿ ಎಷ್ಟು ಜನರಿಗೆ ತೊಂದರೆ ಗೀಡು ಮಾಡುವಂತಹುದಾಗಿದೆ; ಎಷ್ಟು ಭೂಮಿಗೆ

(ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್)

affect ಮಾಡುವಂತಹುದಾಗಿದೆ ; ಎಷ್ಟು ಹಳ್ಳಿಗಳಿಗೆ affect ಮಾಡುವಂತಹುದಾಗಿದೆ ?

ಶ್ರೀ ಆರ್. ಎಂ. ಪಾಟೀಲ್.—ಜನರಿಗೆ affect ಮಾಡುವಂತಹದೆಷ್ಟೆಂಬುದು ಗೊತ್ತಿಲ್ಲ. ಗ್ರಾಮ ಮತ್ತು ಜಮೀನುಗಳ ಬಗ್ಗೆ ಹೇಳುವುದಾದರೆ, ೪,೬೦೦ ಎಕರೆ ಜಮೀನಿಗೂ, ೧,೧೦೪ ಮನೆಗಳಿಗೂ affect ಆಗುವುದಿದೆ ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—೧,೨೮೬ ಕೇಸುಗಳನ್ನು ತೀರ್ಮಾನ ಮಾಡಿದರೆ ಎಷ್ಟು ಹಣವನ್ನು ಸರ್ಕಾರದವರು ಕೊಡಬೇಕಾಗಿಬರುತ್ತದೆ.

ಶ್ರೀ ಆರ್. ಎಂ. ಪಾಟೀಲ್.—ಅದನ್ನು ಈಗಿರುವ ಸ್ಟೇಜ್‌ನಲ್ಲಿ ಹೇಳುವುದು ಕಷ್ಟ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಮಂತ್ರಿಗಳೇನೋ ಬಹಳ ಲಘುವಾಗಿ ಉತ್ತರ ಕೊಡುತ್ತಿದ್ದಾರೆ ; ನಾವು ನಗುತ್ತಲಿದ್ದೇವೆ. ಆದರೆ ೧,೨೮೬ ಜನರ ಪೈಕಿ ಎಷ್ಟೋ ಜನ ಇದನ್ನೇ ನಂಬಿಕೊಂಡು ಮುಳುಗಡೆಯಾಗುವುದರಲ್ಲಿದ್ದಾರೆ. ಹೀಗೆ ನಿಧಾನವಾದರೆ, ಅವರು ಕಾಡಿಗೆ ಹೋಗಬೇಕೋ ಅಥವಾ ಬಾವಿಗೆ ಬೀಳಬೇಕೋ ? ಇನ್ನೆಷ್ಟು ದಿವಸಗಳಲ್ಲಿ ಇವನ್ನು ತೀರ್ಮಾನಮಾಡಬೇಕೆಂದು ನೀವು ನಿರ್ಧಾರ ಮಾಡಿದ್ದೀರಿ ?

ಶ್ರೀ ಆರ್. ಎಂ. ಪಾಟೀಲ್.—ಆದಷ್ಟು ಬೇಗ ತೀರ್ಮಾನ ಮಾಡುತ್ತೇವೆಂದು ನಾನಾಗಲೇ ಹೇಳಿದೆ. ಇಲ್ಲಿಯ ತರೆಗೂ ಯಾರೂ ಕಾಡಿಗೂ ಹೋಗಿಲ್ಲ ; ಬಾವಿಗೂ ಬಿದ್ದಿಲ್ಲ. ಹಾಗೆ ಹೇಳುವದು ಸರಿಯಲ್ಲವೆಂದು ನನ್ನ ಅಭಿಪ್ರಾಯ.

Sri ANNA RAO GANAMUKHI.—May I know the number of villages submerged under the Sharavathi Project ?

ಶ್ರೀ ಆರ್. ಎಂ. ಪಾಟೀಲ್.—ಮೊದಲನೆಯ ಸ್ಟೇಜಿನಲ್ಲಿ ೧೨೨ ಹಳ್ಳಿಗಳು, ಎರಡನೆಯ ಸ್ಟೇಜಿನಲ್ಲಿಯೂ ಅಷ್ಟೇ ಆಗಬಹುದೆಂದು ಹೇಳಬಹುದು.

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ.—ಉಳಿದಿರುವ ಕೇಸುಗಳ ಪೈಕಿ ಡಿಸ್ಟ್ರಿಕ್ಟ್ ಲೆವೆಲ್ಲಿನ ಅಧೀನರುಗಳಿಂದ ನಿಧಾನವಾಗಿರುವುದಷ್ಟು ? ಸರ್ಕಾರದಲ್ಲಿ ಎಷ್ಟು pending ಇವೆ ?

ಶ್ರೀ ಆರ್. ಎಂ. ಪಾಟೀಲ್.—ಅಷ್ಟು ವಿಶದವಾಗಿ ವಿಷಯಗಳು ಗೊತ್ತಿಲ್ಲ. ಅಧಿಕಾರಿಗಳಿಗೆ ಇರುವ ಅಧಿಕಾರದ ಪರಿಮಿತಿಯಿಂದ ತೊಂದರೆಯಾಗಿದೆಯೆನ್ನಬಹುದು.

Sri G. VENKATAI GOWDA.—These cases should have been disposed of by the Land Acquisition Officers themselves by awarding compensation.

ಶ್ರೀ ಆರ್. ಎಂ. ಪಾಟೀಲ್.—ಡಿಲೇ ಆಗಬಾರದೆಂದೇ ಹೆಚ್ಚಿಗೆ ಅಧಿಕಾರವನ್ನು ಕೊಡಬೇಕೆಂದಿದ್ದೇವೆ. ಅಧಿಕಾರದ ವಿಕೇಂದ್ರೀಕರಣ ಮಾಡುವುದು ಸರ್ಕಾರದ ಗಮನದಲ್ಲಿದೆ.

Sri G. VENKATAI GOWDA.—Is it not a fact that the passing of the awards is within the jurisdiction of the Land Acquisition Officer.

Sri R. M. PATIL.—The main thing is that the delay is due to the powers exercised by the officers concerned.

ಶ್ರೀ ಎ. ಜೆ. ದೊಡ್ಡಮೇಟಿ.—ಡಿಲೇ ಆಗಬಾರದು ಎಂದು ಹೇಳಿ ಹೆಚ್ಚಿಗೆ ಅಧಿಕಾರವನ್ನು ಕೊಡಬೇಕೆಂದು ಮಾಡಿದ್ದೀರಾ ?

ಶ್ರೀ ಆರ್. ಎಂ. ಪಾಟೀಲ್.—ವಿಕೇಂದ್ರೀಕರಣ ಮಾಡಬೇಕೆಂದಿದ್ದೇವೆಂದು ನಾನು ಆಗಲೇ ಹೇಳಿದೆ.

ಶ್ರೀ ಎ. ಜೆ. ದೊಡ್ಡಮೇಟಿ.—ನಿಮ್ಮಿಂದ ಯಾರಾದರೂ ಕಾಂಪೆಟೆಸೇಷನ್ ಪಡೆದು ಸ್ಥಳ ಬದಲಾವಣೆ ಯಾಗಿದ್ದಾರೆಯೇ ?

ಶ್ರೀ ಆರ್. ಎಂ. ಪಾಟೀಲ್.—ಯಾರಿಗೂ ಇನ್ನೂ ಕಾಂಪೆಟೆಸೇಷನ್ ಸಿಕ್ಕಿಲ್ಲ. ಅವರುಗಳು ಇನ್ನೂ ಇಲ್ಲೇ ಇದ್ದಾರೆ.

ಶ್ರೀ ಕೆ. ಲಕ್ಕಪ್ಪ.—ಸ್ಥಳ ಬದಲಾವಣೆ ಮಾಡಿಕೊಳ್ಳಲು ಆ ಹಳ್ಳಿಗಳವರಿಗೆ ಏನೇನು ಸೌಕರ್ಯ ಕೊಟ್ಟಿದ್ದೀರಿ ?

ಶ್ರೀ ಆರ್. ಎಂ. ಪಾಟೀಲ್.—ಅದು ಈ ಪ್ರಶ್ನೆಯಲ್ಲಿ ಬರುವದಿಲ್ಲ.

ಶ್ರೀ ಕೆ. ಲಕ್ಕಪ್ಪ.—ಎಷ್ಟು ಹೊಸದಾಗಿ ಭೂಮಿಯನ್ನು ಮಂಜೂರು ಮಾಡಿದ್ದೀರಿ, ಮತ್ತು ಎಷ್ಟು ಹಣ ಅವಾರ್ಡ್ ಮಾಡಿದ್ದೀರಿ, ಬೇರೆ ಕಡೆ ವಲಸೆ ಹೋಗಲು ಎಂದು ?

ಶ್ರೀ ಆರ್. ಎಂ. ಪಾಟೀಲ್.—ಸಾಗರದಲ್ಲಿ ೩,೪೬೦ ಎಕರೆಗಳನ್ನು ಕೊಟ್ಟಿದ್ದೇವೆ.—In Sagar 3,460 acres of land comprised in thirty six villages have been acquired and a compensation of Rs. 33,63,916 has been paid. Regarding Hosanagar Taluk, the Special Land Acquisition Officer of Sagar is doing preliminary work. One more Special Land Acquisition Officer has been appointed for Hosanagar Taluk. In 1962, this officer has passed awards in respect of 250 acres comprised in 13 villages.

ಒಬ್ಬ ಮಾನ್ಯ ಸದಸ್ಯರು.—ಪರಿಹಾರ ಕೊಟ್ಟಿರುವುದು ಸಾಲದೆಂದು ಹೇಳಿ ಸಿವಿಲ್ ಕೋರ್ಟಿಗೆ ಎಷ್ಟು ಸಂದರ್ಭಗಳಲ್ಲಿ refer ಆಗಿದೆ ?

Sri R. M. PATIL.—That is outside the scope of this question.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಈ ೧,೨೮೬ ಕೇಸುಗಳ ಪೈಕಿ ಇಂಟರಿಮ್ ರಿಲೀಫ್ ಯಾವುದಕ್ಕಾದರೂ ಕೊಟ್ಟಿದ್ದೀರಾ ?

ಶ್ರೀ ಆರ್. ಎಂ. ಪಾಟೀಲ್.—ಆ ವಿಷಯದ ಬಗ್ಗೆ ನನ್ನಲ್ಲಿ ಮಾಹಿತಿ ಈಗಿಲ್ಲ.

ಶ್ರೀ ಜಿ. ವೆಂಕಟೇ ಗೌಡ.—Interim ರಿಲೀಫ್ ಕೊಡುವುದಕ್ಕೆ ಸರ್ಕಾರದವರೇನಾದರೂ ಆರ್ಡರ್ ಹೊರಡಿಸುತ್ತಾರೆಯೆ ?

Sri R. M. PATIL.—Decentralisation is the only remedy to expedite acquisition proceedings and Government is contemplating it.